ಕಥೆ

# ಪುನರಾಗಮನ



**ಶೈಲಜಾ ವಿಜಯ್‌ಕುಮಾರ್**

ಕಲೆ: ವೆಂಕಟ್ರಮಣ ಭಟ್

ಪೂರ್ವದಲ್ಲಿರುವ ನಮ್ಮವರಿಗೆಲ್ಲ ಮುಸುಕಾದರೂ ಬಣ್ಣ ಬಣ್ಣದ, ಮೊದಲಿದ್ದರೂ ಕೊನೆಯಿಲ್ಲದ ಕನಸುಗಳ ನೀಡಿ, ನಿರಾಶೆಗಳ ನಾಳೆಗಳಲ್ಲೂ ಆಶೆಯಿಂದ ಬೆಳಗುಗಳನ್ನು ನಿರೀಕ್ಷಿಸುವ ನಿದ್ರೆಯ ಕಪ್ಪು ಕಂಬಳಿಯನ್ನು ಹೊದ್ದಿಸಿ, ಸಪ್ತ ವರ್ಣಗಳ ನನಸಾಗುವ ಕನಸುಗಳು, ಬಿಡುವಿಲ್ಲದ ಬೇಕುಗಳನ್ನು ಪೂರೈಸುವ ಬೆಳಗುಗಳೇ ತುಂಬಿರುವ, ನಮ್ಮವರಾದರೂ ನಮ್ಮವರಾಗದವರಿರುವ ಪಶ್ಚಿಮದವರ ದೇಶಕ್ಕೆ ಮೆಲ್ಲ ಮೆಲ್ಲನೆ, ನಿತ್ಯವೂ ಬರುವಂತೆ ಇಂದು ಕೂಡ ಸೂರ್ಯದೇವ ಉದಯಿಸಿದ್ದ. ಅವನೇನು ಇಲ್ಲಿಗೆ ಪ್ರತಿದಿನ ಸಂತೋಷದಿಂದ ಬರುತ್ತಾನೆಯೋ? ಅಥವಾ ಬಲವಂತದಿಂದ ಪ್ರಕೃತಿ ನಿಯಮಕ್ಕೊಳಪಟ್ಟು ಇನ್ನೇನು ವಿಧಿಯಿಲ್ಲವಲ್ಲ ಎಂದುಕೊಂಡು ಬರುತ್ತಾನೋ? ಅಥವಾ ನಮ್ಮಂತೆಯೇ ದೇಶದ ಬಾಂಧವ್ಯವನ್ನು ತೊರೆದು ಸಂಸ್ಕೃತಿ ಸಂಬಂಧಗಳ ಸೀಮಾರೇಖೆಗಳನ್ನು ದಾಟಿ ಅಪೂರ್ವವಾದ ಅನುಭವವೊಂದು ಸಾಗರಗಳ ಆಚಿನ ಲೋಕದಲ್ಲಿ ಸಿಗಬಹುದೇನೋ ಎಂಬ ಮಹತ್ತರವಾದ ಆಶಯದೊಂದಿಗೆ ಬರುತ್ತಾನೋ? ಕೇಳಬೇಕೆನಿಸಿತು. ಎಷ್ಟೋ ವರ್ಷಗಳ ಹಿಂದೆ ನಮ್ಮ ಊರು ನಮ್ಮ ಜನ ನಮ್ಮ ಭಾಷೆ ಎಲ್ಲವನ್ನು ತೊರೆದು ಬಂದಿರುವ ನಮಗೇ ಎಂದಾದರೊಂದು ದಿನ ಅವೆಲ್ಲದರ ನೆನಪು ಬಂದಾಗ ದುಃಖದ ಕೋಡಿಯೇ ಹರಿದುಬಿಡುತ್ತದೆ. ಹೀಗಿರುವಾಗ ಪ್ರತಿದಿನ ನಮ್ಮ ಮಣ್ಣಿನ ವಾಸನೆ ಕುಡಿದು ಇಲ್ಲಿಗೆ ಬರುತ್ತಾನಲ್ಲಾ ಈ ಸೂರ್ಯ ಇವನಿಗೇನೆನಿಸುತ್ತದೆಯೋ? ಅವನಿಗೇನು? ಎಲ್ಲಾ ದೇಶಗಳಲ್ಲೂ ಇಣುಕಿನೋಡುವವನಿಗೆ ಯಾವ ಊರಾದರೇನು, ಯಾವ ನೆಲವಾದರೇನು ಆದರೂ ಎಲ್ಲರಿಗೂ ಇರುವಂತೆ ಸೂರ್ಯದೇವನಿಗೂ ಅವನಿಗಿಷ್ಟವಾಗುವಂತಹ ನಾಡು, ತಾನಲ್ಲಿ ನೆಲೆಸಬೇಕು, ನಾನಲ್ಲಿಗೆ ಸೇರಿದವನು ಎಂಬ ಆಶೆಯಿರಬೇಕಲ್ಲವೇ? ಬಹುಶಃ ಇದಕ್ಕೆಲ್ಲ ನೀನು ಉತ್ತರ ಹೇಳಲೇಬೇಕು ಎಂದು ಅವನನ್ನು ಕಾಡಿದರೆ ಅವನು, 'ನಾನೇನು ಮಾಡಲಿ. ಭೂಮಿ ತಿರುಗಿದಂತೆ ನಾನು ಬೆಳಕು ಚೆಲ್ಲಬೇಕಲ್ಲಾ, ಇದೇ ಪ್ರಕೃತಿ ನಿಯಮ. ನಾನು